ಶ್ರೀ ಉಮೇಶ ವಿ.ಕತ್ತಿ : ಮಂಗಳೂರು ಮತ್ತು ಶಿವಮೊಗ್ಗ ಭಾಗಗಳಲ್ಲಿ ಬಹಳ ದಟ್ಟ ಅರಣ್ಯ ಪ್ರದೇಶವಿರುವುದರಿಂದ ಅವರಿಗೆ ಪರ್ಯಾಯವಾದ ಭೂಮಿಯನ್ನು ಕೊಟ್ಟರೂ ಸಹ ಅದನ್ನು ಒಪ್ಪಿಕೊಳ್ಳಲು ಅವರು ಬಹಳ ಹಿಂದು ಮುಂದು ನೋಡುತ್ತಾರೆ.

ಅಧ್ಯಕ್ಷರು : ಮಾನ್ಯ ಗೋಪಾಲ ಪೂಜಾರಿಯವರು ಉಪಚುನಾವಣೆಯಲ್ಲಿ ಗೆದ್ದು ಬಂದಿರುತ್ತಾರೆ. ಅವರು ಹೊಸದಾಗಿ ಬಂದಿರುವ ಸದಸ್ಯರು. ಆ ಕೆಲಸ ನಡೆಯಬೇಕೆಂಬ ಅಪೇಕ್ಷೆ ಅವರದ್ದು. ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಆ ಬದಲಿ ಜಾಗದ ವ್ಯವಸ್ಥೆ ಮಾಡಿ ಅವರ ಕೆಲಸವನ್ನು ಮಾಡಿಕೊಡಿ.

ಶ್ರೀ ಉಮೇಶ್ ವಿ.ಕತ್ತಿ : ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ ಇಲ್ಲಿ ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಆ ಕೆಲಸವನ್ನು ಮಾಡಿಕೊಡಲು ಪ್ರಯತ್ನ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಆ ರಸ್ತೆಗೆ ಎಷ್ಟು ಜಮೀನು ಬೇಕು ಎಂಬ ಬಗ್ಗೆ ಸರ್ವೆ ಮಾಡಿಸಿದ್ದೀರಾ ? ಆ ರೀತಿ ಮಾಡಿದ್ದರೆ ಭೂಮಿಯ ಬಿಡುಗಡೆಗಾಗಿ ಅರಣ್ಯ ಇಲಾಖೆಗೆ ನಿಗಧಿತ ಫಾರಂನಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದೀರಾ ? ಆ ಕೆಲಸ ಮಾಡಿರದಿದ್ದರೆ ಇದನ್ನು ಯಾವಾಗ ಮಾಡುತ್ತೀರಿ ?

ಶ್ರೀ ಉಮೇಶ್ ವಿ.ಕತ್ತಿ : ಮಾನ್ಯ ಸದಸ್ಯರ ಸಲಹೆಯನ್ನು ಪರಿಗಣಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಕುಣಿಗಲ್ ಸಿವಿಲ್ ಜಡ್ಜ್ ನ್ಯಾಯಾಲಯ ಸ್ಥಾಪನೆ.

129 (1005)ಶ್ರೀ ಎಸ್.ಪಿ.ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ)ಕುಣಿಗಲ್ ಸಿವಿಲ್ ಜಡ್ಜ್ ಸೀನಿಯರ್ ನ್ಯಾಯಾಲಯ ಸ್ಥಾಪನೆ ಅವಶ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ)ಹಾಗಿದ್ದಲ್ಲಿ ಈ ನ್ಯಾಯಾಲಯವನ್ನುತೆರೆಯಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳು ಯಾವುವು ?

ಶ್ರೀ ಎಂ.ಸಿ.ನಾಣಯ್ಯ (ಕಾನೂನು ಸಂಸದೀಯ ವ್ಯವಹಾರಗಳು ಶಾಸನ ರಚನೆ ಸಚಿವರು) :

ಅ)ಹೌದು

ಆ)ಕುಣಿಗಲ್‌ನಲ್ಲಿ ಸೀನಿಯರ್ ಸಿವಿಲ್ ಜಡ್ಜ್‌ಕೋರ್ಟ್ ಅನ್ನು ಪ್ರಾರಂಭಿಸಲು ಕರ್ನಾಟಕ ಉಚ್ಚ ನ್ಯಾಯಾಲಯವು ಸರ್ಕಾರಕ್ಕೆಶಿಫಾರಸ್ಸು ಮಾಡಿದೆ. ಸದರಿ ನ್ಯಾಯಾಲಯವನ್ನು ಪ್ರಾರಂಭಿಸಲು ಇಷ್ಟರಲ್ಲಿಯೇ ಅಗತ್ಯವಿರುವ ಎಲ್ಲಾ ಆಡಳಿತಾತ್ಮಕ ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗುವುದು.

ಶ್ರೀ ಎಸ್.ಪಿ. ಮುದ್ದ ಹನುಮೇಗೌಡ : ಮಾನ್ಯ ಅಧ್ಯಕ್ಷರೆ, ಕುಣಿಗಲ್‌ನಲ್ಲಿ ಸೀನಿಯರ್ ಸಿವಿಲ್ ಜೆಡ್ಜ್ ನ್ಯಾಯಾಲಯದ ಸ್ಥಾಪನೆ ಅವಶ್ಯಕವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆಗೆ ಹೌದು ಎಂದು ಉತ್ತರ ನೀಡಿದ್ದಾರೆ. ಮತ್ತು ಸಧ್ಯದಲ್ಲಿ ಇದಕ್ಕೆ ಬೇಕಾಗಿರುವ ಆಡಳಿತಾತ್ಮಕ

ಪ್ರಕ್ರಿಯೆಗಳನ್ನು ಪ್ರಾರಂಭಿಸಲಾಗುವುದು ಎಂದು ಉತ್ತರ ನೀಡಿದ್ದಾರೆ. ಅದಕ್ಕಾಗಿ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ ಅಭಿನಂದಿಸುತ್ತೇನೆ. ಕುಣಿಗಲ್‌ನಲ್ಲಿ ಶೀಘ್ರ ಸೀನಿಯರ್ ಸಿವಿಲ್ ನ್ಯಾಯಾಲಯ ಸ್ಥಾಪನೆ ಮಾಡಲು ಎಲ್ಲಾ ಮೂಲಭೂತ ಸೌಲಭ್ಯಗಳು ಇದೆ. ಇದರಿಂದ ಇದನ್ನು ಮಾಡಲು ಹೆಚ್ಚಿನ ಆರ್ಥಿಕ ಹೊರೆ ಬೀಳುವುದಿಲ್ಲ. ಅಲ್ಲಿ ಹೆಚ್ಚಿನ ಮೊಕದ್ದಮೆಗಳು ಬಾಕಿ ಇರುವ ದೃಷ್ಟಿಯಿಂದ ಮೇ 27ರಿಂದೇನು ಬೇಸಿಗೆ ರಜೆಯ ನಂತರ ನ್ಯಾಯಾಲಯಗಳು ಪ್ರಾರಂಭವಾಗುತ್ತದೆ ಆಗಲೇ ಈ ಸಿವಿಲ್ ಸೀನಿಯರ್ ನ್ಯಾಯಾಲಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ.ನಾಣಯ್ಯ : ಮಾನ್ಯ ಅಧ್ಯಕ್ಷರೆ, ಕುಣಿಗಲ್‌ನ್ನು ಒಳಗೊಂಡಂತೆ ಇತರೆ ಎಂಟು ಕಡೆಗಳಲ್ಲಿ ಸೀನಿಯರ್ ಸಿವಿಲ್ ನ್ಯಾಯಾಲಯಗಳ ಸ್ಥಾಪನೆ ಮಾಡಲು ಕರ್ನಾಟಕ ಉಚ್ಚ ನ್ಯಾಯಾಲಯದವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಕಳುಹಿಸಿರುತ್ತಾರೆ. ಸಿಬ್ಬಂದಿಯ ನೇಮಕಕ್ಕೆ ಅನುಮೋದನೆ ಬೇಕಾಗುತ್ತದೆ. ಪ್ರಿಸೈಡಿಂಗ್ ಆಫೀಸರ್‌ರವರ ನೇಮಕಾತಿಗೆ ಅನುಮೋದನೆ ಬೇಕಾಗುತ್ತದೆ. ಆ ನ್ಯಾಯಾಲಯಕ್ಕೆ ಬೇಕಾಗಿರುವ ಪೀಠೋಪಕರಣಗಳು ಮತ್ತು ಇತರೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಅನುಮತಿಯನ್ನು ಆರ್ಥಿಕ ಇಲಾಖೆಯಿಂದ ಪಡೆಯಬೇಕಾಗುತ್ತದೆ. ಆ ಶಿಫಾರಸ್ಸು ಬಂದಕೂಡಲೆ ಅದನ್ನು ಆರ್ಥಿಕ ಇಲಾಖೆಗೆ ಅನುಮೋದನೆಗಾಗಿ ಕಳಿಸಿಕೊಟ್ಟಿರುತ್ತೇನೆ. ಇದರ ಬಗ್ಗೆ ಹಣಕಾಸು ಸಚಿವರ ಜೊತೆ ಸಹ ಚರ್ಚೆ ಮಾಡಿರುತ್ತೇನೆ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಕ್ರಿಯೆಗಳನ್ನು ಬಹಳ ಬೇಗನೆ ಮುಗಿಸಿ ಈ ವರ್ಷದ ಒಳಗಡೆ ಆ ನ್ಯಾಯಾಲಯಗಳ ಸ್ಥಾಪನೆಯನ್ನು ಖಂಡಿತವಾಗಿ ಮಾಡುತ್ತೇವೆ.

ಲೋಕೋಪಯೋಗಿ ಇಲಾಖೆಯಲ್ಲಿ ಗ್ಯಾಂಗ್‌ಮನ್‌ಗಳ ನೇಮಕಾತಿ

130 (468)ಶ್ರೀ ಎ.ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಲೋಕೋಪಯೋಗಿ ಇಲಾಖಾ ರಸ್ತೆಯ ಮಂಟಿನೆನ್ಸ್‌ಗಾಗಿ "ಗ್ಯಾಂಗ್‌ಮನ್"ಗಳಿಲ್ಲದೇ ಇರುವುದರಿಂದ ರಸ್ತೆಗಳ ಉಸ್ತುವಾರಿಗಾಗಿ ತೊಂದರೆಗಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

ಶ್ರೀ ಉಮೇಶ್ ವಿ.ಕತ್ತಿ (ಲೋಕೋಪಯೋಗಿ ಸಚಿವರು) :

ಅ) ಹೌದು

ಆ) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 9ಸೇಸ್ಥೆಆ97 ದಿನಾಂಕ : 22.4.97ರ ಪ್ರಕಾರ ದಿನಗೂಲಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಆದ್ದರಿಂದ ಹಾಲಿ ಕೆಲಸ ನಿರ್ವಹಿಸುತ್ತಿರುವ ಗ್ಯಾಂಗ್‌ಮನ್‌ಗಳಿಂದಲೇ ಕೆಲಸ ನಿರ್ವಹಣೆ ಕೆಲಸ ಕಾರ್ಯಗಳನ್ನು ಮಾಡಲಾಗುತ್ತಿದೆ. ಅಲ್ಲದೆ ನಿಯತಕಾಲಿಕವಾಗಿ ನೇರ ನೇಮಕಾತಿಯಿಂದ ಗ್ಯಾಂಗ್‌ಮನ್‌ಗಳನ್ನು ನೇಮಕ ಮಾಡಿ ಕೊಳ್ಳಲು ಲೋಕೋಪಯೋಗಿ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅವಕಾಶವಿಲ್ಲದ್ದರಿಂದ ರಸ್ತೆಗಳ ನಿರ್ವಹಣೆ ಕೆಲಸವನ್ನು ಕೆಲವು ವಿಭಾಗಗಳಲ್ಲಿ ತುಂಡು ಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲಾಗುತ್ತಿದೆ.